ಎಂ.ವಿ.ಸಿ.457/2024, ಪಿ.ಡಬ್ಲ್ಯೂ.2 ಹೆಸರುಃ ಡಾ.ಮಂಜುನಾಥ

**ದಿಃ17-09-2025 ರಂದು ಸಾಕ್ಷಿದಾರರು ಹಾಜರಿದ್ದು, ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ ಅರ್ಜಿದಾರರ ಪರ : ಶ್ರೀ ಎನ್.ಹೆಚ್.ಕೆ. ಯವರಿಂದಃ**

ನಾನು ನನ್ನ ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿರುತ್ತೇನೆ. ಇದರಲ್ಲಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತದೆ. ಪ್ರಮಾಣ ಪತ್ರದಲ್ಲಿ ಇರುವ ಸಹಿಗಳು ನನ್ನದೇ ಆಗಿರುತ್ತದೆ.

ಸಾಕ್ಷಿ ನಿಪಿ.11 ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ನಿಪಿ.11(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು : 2 ನೇ ಎದುರುದಾರರ ಪರ ಶ್ರೀ ಪಿ.ಎನ್. ಯವರಿಂದಃ**

2. ನಾನು ಅರ್ಜಿದಾರರಿಗೆ ಮೊದಲಬಾರಿ ಜನವರಿ 2025 ರಲ್ಲಿ ಚಿಕಿತ್ಸೆಯನ್ನು ನೀಡಿರುತ್ತೇನೆ. ಅರ್ಜಿದಾರರು ಮೂಳೆ ಮುರಿತ ಆಗಿದೆ ಎಂದು ಚಿಕಿತ್ಸೆ ಪಡೆಯಲು ಬಂದಿದ್ದರು. ಅರ್ಜಿದಾರರಿಗೆ ಫಿಸಿಯೋ ಥೆರಫಿ ಮಾಡಿ ನೋವಿನ ಮಾತ್ರೆಗಳನ್ನು ಮತ್ತು ಕ್ಯಾಲ್ಸಿಯಂ ಮಾತ್ರೆಗಳನ್ನು ನೀಡಿರುತ್ತೇನೆ. ಆ ನಂತರ ನನ್ನ ಬಳಿ ಅರ್ಜಿದಾರರು ಚಿಕಿತ್ಸೆ ಪಡೆಯಲು ಎರಡುಭಾರಿ ಬಂದಿರುತ್ತಾರೆ. ಅರ್ಜಿದಾರರು ನನ್ನ ಬಳಿ ಚಿಕಿತ್ಸೆ ಪಡೆಯಲು ಬಂದಿದ್ದ ಬಗ್ಗೆ ಅವರಿಗೆ ಸಲಹಾ ಚೀಟಿಗಳನ್ನು ನೀಡಿರುತ್ತೇನೆ. ಅಂಗನ್ಯೂನ್ಯತೆಯ ಪ್ರಮಾಣ ಪತ್ರವನ್ನು ದಿನಾಂಕ 23.04.2025 ರಂದು ನೀಡಿರುತ್ತೇನೆ. ಅಂಗನ್ಯೂನ್ಯತೆಯ ಪ್ರಮಾಣ ಪತ್ರವನ್ನು ನೀಡಿದ ನಂತರದಲ್ಲಿ ಅರ್ಜಿದಾರರು ನನ್ನ ಬಳಿ ಒಮ್ಮೆ ಚಿಕಿತ್ಸೆಯನ್ನು ಪಡೆಯಲು ಬಂದಿದ್ದರು. ಆಗ ನಾನು ಅರ್ಜಿದಾರರಿಗೆ ನೋವಿನ ಮಾತ್ರೆಗಳನ್ನು ಮಾತ್ರ ನೀಡಿರುತ್ತೇನೆ.

3. ಅರ್ಜಿದಾರರು ಅಜ್ಜಂಪುರ ತಾಲ್ಲೂಕಿನ ಶಿವನಿ ಗ್ರಾಮದವರು. ಅರ್ಜಿದಾರರು ನನ್ನ ಬಳಿ ಬರುವ ಪೂರ್ವದಲ್ಲಿ ಆರಾಧನ ಆಸ್ಪತ್ರೆ, ಶಿವಮೊಗ್ಗದಲ್ಲಿ ಚಿಕಿತ್ಸೆಯನ್ನು ಪಡೆದಿದ್ದರು. ನಾನು ಗಾಯದ ಪ್ರಮಾಣ ಪತ್ರ ಮತ್ತು ಬಿಡುಗಡೆ ಸಾರಾಂಶವನ್ನು ಪರಿಶೀಲನೆ ಮಾಡಿ ಅಂಗನ್ಯೂನ್ಯತೆಯ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಅರ್ಜಿದಾರರು ಹೊಸದುರ್ಗದ ಶ್ರೇಯ ಆರ್ಥೋಕೇರ್ ಆಸ್ಪತ್ರೆಯಲ್ಲಿ ದಾಖಲಾತಿ ಪ್ರಥಮ ಚಿಕಿತ್ಸೆಯನ್ನು ಪಡೆದ ಬಗ್ಗೆ ನನ್ನ ಸಾಕ್ಷ್ಯದ ಪ್ರಮಾಣ ಪತ್ರದಲ್ಲಿ ನಮೂದಿಸಿರುತ್ತೇನೆ ಎಂದರೆ ಸರಿ. ಶ್ರೇಯ ಆಸ್ಪತ್ರೆಯನ್ನು ಡಾ. ಸಂಜಯ್, ಕೀಲು ಮತ್ತು ಮೂಳೆ ತಜ್ಞರು ನಡೆಸುತ್ತಾರೆ ಎಂದರೆ ಸರಿ. ಅರ್ಜಿದಾರರು ನನಗೆ ಡಾ. ಸಂಜಯ್‌ರವರು ನೀಡಿದ್ದ ಪ್ರಥಮ ಚಿಕಿತ್ಸೆಯ ಕುರಿತಾಗಿ ದಾಖಲಾತಿಯನ್ನು ತೋರಿಸಿಲ್ಲ. ಅರ್ಜಿದಾರರು ಆರಾಧನಾ ಆಸ್ಪತ್ರೆಯಲ್ಲಿ ಎರಡು ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿದ್ದಾರೆ. ಆರಾಧನಾ ಆಸ್ಪತ್ರೆಯಲ್ಲಿ ಎಡಮುಂಗೈಗೆ ಶಸ್ತ್ರ

ಚಿಕಿತ್ಸೆ ಮಾಡಿ ಎರಡೂ ಮೂಳೆಗಳಿಗೆ ಸ್ಕ್ರೂವ್ ಮತ್ತು ಪ್ಲೇಟ್‌ಗಳನ್ನು ಅಳವಡಿಸಿರುತ್ತಾರೆ. ಅರ್ಜಿದಾರರು ಶಸ್ತ್ರ ಚಿಕಿತ್ಸೆಯ ನಂತರ ಆರಾಧನ ಆಸ್ಪತ್ರೆಗೆ ಎಷ್ಟು ಭಾರಿ ಹೋಗಿದ್ದರು ಎಂಬ ಬಗ್ಗೆ ನನಗೆ ಮಾಹಿತಿ ನೀಡಿಲ್ಲ. ನಾನು ಅಂಗನ್ಯೂನ್ಯತೆಯ ಪ್ರಮಾಣ ಪತ್ರವನ್ನು ನೀಡುವ ಕಾಲಕ್ಕೆ ಸ್ಕ್ರೂವ್ ಮತ್ತು ಪ್ಲೇಟ್‌ಗಳನ್ನು ತೆಗೆದಿದ್ದರು. ಅಪಘಾತ ಏರ್ಪಟ್ಟ ಒಂದು ವರ್ಷದ ಒಳಗಾಗಿ ಪ್ಲೇಟ್ ಮತ್ತು ಸ್ಕರೂವ್‌ಗಳನ್ನು ತೆಗೆದಿರುತ್ತಾರೆ ಎಂದರೆ ಸರಿ. ಮೂಳೆ ಕೂಡಿದ್ದರೆ ಅಥವಾ ಮೂಳೆ ಕೂಡದೆ ಇದ್ದಲ್ಲಿ ಕೀವು ಆದಲ್ಲಿ ಸ್ಕ್ರೂವ್ ಮತ್ತು ಪ್ಲೇಟ್‌ಗಳನ್ನು ತೆರವುಗೊಳಿಸುತ್ತಾರೆ. ಸಕ್ರೂವ್ ಮತ್ತು ಪ್ಲೇಟ್‌ಗಳನ್ನು ಆರಾಧನಾ ಆಸ್ಪತ್ರೆಯಲ್ಲಿಯೇ ತೆಗೆಸಿರುತ್ತಾರೆ ಎಂದರೆ ಸರಿ. ಯಾವ ಕಾರಣಕ್ಕಾಗಿ ಸ್ಕ್ರೂವ್ ಮತ್ತು ಪ್ಲೇಟ್‌ಗಳನ್ನು ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸ್ಕ್ರೂವ್ ಮತ್ತು ಪ್ಲೇಟ್‌ಗಳನ್ನು ತೆರವುಗೊಳಿಸಲು ಒಳರೋಗಿಯಾಗಿ ದಾಖಲಾಗಬೇಕು ಎಂದರೆ ಸರಿ. ಆಸ್ಪತ್ರೆಯಲ್ಲಿ ಯಾವ ಕಾರಣಕ್ಕಾಗಿ ಸ್ಕ್ರೂವ್ ಮತ್ತು ಪ್ಲೇಟ್‌ಗಳನ್ನು ತೆಗೆದಿರುತ್ತಾರೆ ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ. ಅಂಗನ್ಯೂನ್ಯತೆಯ ಪ್ರಮಾಣ ಪತ್ರವನ್ನು ನೀಡುವ ಸಮಯದಲ್ಲಿ ಸದರಿ ದಾಖಲಾತಿಯನ್ನು ನಾನು ಪರಿಶೀಲನೆ ಮಾಡಿಲ್ಲ. ನಾನು ಅರ್ಜಿದಾರರನ್ನು ಸ್ಕ್ರೂವ್ ಮತ್ತು ಪ್ಲೇಟ್‌ಗಳನ್ನು ಯಾವಾಗ ತೆಗೆದರು ಎಂಬ ಬಗ್ಗೆ ಹಾಗೂ ಮುಂದುವರೆದ ಚಿಕಿತ್ಸೆಯ ಅಗತ್ಯತೆ ಇದೆ ಎಂಬ ಬಗ್ಗೆ ವಿಚಾರಣೆ ಮಾಡಿಲ್ಲ. ನಾನು ಅಂಗನ್ಯೂನ್ಯತೆಯ ಪ್ರಮಾಣ ಪತ್ರವನ್ನು ನೀಡುವ ಸಮಯದಲ್ಲಿ ಪ್ಲೇಟ್ ಮತ್ತು ಸ್ಕ್ರೂವ್‌ಗಳನ್ನು ತೆರವುಗೊಳಿಸಿರುವ ಬಗ್ಗೆ ಪರಿಶೀಲನೆ ಮಾಡಬೇಕಾಗಿತ್ತು ಎಂದರೆ ಸರಿಯಲ್ಲ.

4. ಆರಾಧನಾ ಆಸ್ಪತ್ರೆಯಲ್ಲಿ ಒಳ್ಳೆಯ ಗುಣಮಟ್ಟದ ಚಿಕಿತ್ಸೆಯನ್ನು ನೀಡುತ್ತಾರೆ ಎಂದರೆ ಸರಿ. ಅರ್ಜಿದಾರರಿಗೆ ಆರಾಧನಾ ಆಸ್ಪತ್ರೆಯಲ್ಲಿ ಗುಣಮಟ್ಟದ ಚಿಕಿತ್ಸೆಯನ್ನು ನೀಡಿರುತ್ತಾರೆ ಎಂದರೆ ಸರಿ. ಅರ್ಜಿದಾರರ ಮೂಳೆ ಕೂಡಿರುವ ಕಾರಣದಿಂದಲೇ ಪ್ಲೇಟ್ ಮತ್ತು ಸ್ಕ್ರೂವ್‌ಗಳನ್ನು ತೆರವುಗೊಳಿಸಿರುತ್ತಾರೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಚಿಕಿತ್ಸೆ ನೀಡಿರುವ ವೈದ್ಯರು ಆರಾಧನಾ ಆಸ್ಪತ್ರೆಯಲ್ಲಿ ಈಗಲೂ ಕೂಡ ಕಾರ್ಯನಿರ್ವಹಿಸುತ್ತಿರುತ್ತಾರೆ ಎಮದರೆ ಸರಿ. ಅರ್ಜಿದಾರರ ಗ್ರಾಮಕ್ಕೆ ಶಿವಮೊಗ್ಗ ಹತ್ತಿರವಾಗಿದ್ದು, ಹೊಳಲ್ಕೆರೆ ದೂರ ಆಗುತ್ತದೆ ಎಂದರೆ ಗೊತ್ತಿಲ್ಲ. ಶಿವನಿ ಗ್ರಾಮದ ಪ್ರದೇಶದ ಕಡೆಯವರು ಹೊಳಲ್ಕೆರೆಗೆ ಬಂದು ಚಿಕಿತ್ಸೆ ಪಡೆಯುವುದಿಲ್ಲ ಎಂದರೆ ಸರಿಯಲ್ಲ. ಆರಾಧನಾ ಆಸ್ಪತ್ರೆಯ ವೈದ್ಯರೆ ಅಂಗನ್ಯೂನ್ಯತೆಯ ಪ್ರಮಾಣ ಪತ್ರವನ್ನು ನೀಡಲು ಸೂಕ್ತರಾಗಿರುತ್ತಾರೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಅಂಗನ್ಯೂನ್ಯತೆಯ ಪ್ರಮಾಣ ಪತ್ರವನ್ನು ನನ್ನ ಖಾಸಗೀ ಆಸ್ಪತ್ರೆಯಲ್ಲಿ ನೀಡಿರುತ್ತೇನೆ. ಅರ್ಜಿದಾರರಿಗೆ ಅಂಗನ್ಯೂನ್ಯತೆಯ ಪ್ರಮಾಣ ಪತ್ರವನ್ನು ನೀಡುವ ಪೂರ್ವದಲ್ಲಿ ಕ್ಷಕಿರಣವನ್ನು ತೆಗೆಸಿರುತ್ತಾರೆ. ನಾನು ಸರ್ಕಾರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ ಎಂದರೆ ಸರಿ. ಪ್ರತಿ ಸರ್ಕಾರಿ

ಆಸ್ಪತ್ರೆಯಲ್ಲಿ ಮೆಡಿಕಲ್ ಬೋರ್ಡ್ ಇರುತ್ತದೆ ಎಂದರೆ ಸರಿ. ಅರ್ಜಿದಾರರು ನನ್ನ ಖಾಸಗಿ ಆಸ್ಪತ್ರೆಗೆ ಬಂದ ಕಾರಣ ಸರ್ಕಾರಿ ಆಸ್ಪತ್ರೆಯಲ್ಲಿ ಅಂಗನ್ಯೂನ್ಯತೆಯ ಪ್ರಮಾಣ ಪತ್ರವನ್ನು ನೀಡಿಲ್ಲ. ಮೆಡಿಕಲ್ ಬೋರ್ಡ್‌ನಲ್ಲಿ ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ನೀಡಿದಾಗ ಅದು ಸರಿಯಾಗಿ ಇಲ್ಲದಿದ್ದಲ್ಲಿ, ಸಕ್ಷಮ ಪ್ರಾಧಿಕಾರದವರು ಪ್ರಶ್ನಿಸುತ್ತಾರೆ ಎಂಬ ಕಾರಣದಿಂದ ಸರ್ಕಾರಿ ಆಸ್ಪತ್ರೆಯಲ್ಲಿ ಅಂಗನ್ಯೂನ್ಯತಾ ಪ್ರಮಾಣ ಪತ್ರವನ್ನು ನೀಡಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರ ಎಡಮೊಣಕೈ ಮತ್ತು ಮಣಿಕಟ್ಟಿನ ಚಲನವಲನ ಕುಂಟಿತವಾಗಿತ್ತು. ಸ್ನಾಯುಗಳು ಸ್ವಲ್ಪ ಮಟ್ಟಿಗೆ ಶಕ್ತಿಯನ್ನು ಕಳೆದುಕೊಂಡಿದ್ದವು. ಭಾರ ಎತ್ತಲು ಆಗುತ್ತಿರಲಿಲ್ಲ, ಬಟ್ಟೆ ಹಾಕಿಕೊಳ್ಳಲು ಆಗುತ್ತಿರಲಿಲ್ಲ, ಗ್ರಿಪ್ ಶಕ್ತಿ ಕಡಿಮೆಯಾಗಿತ್ತು. ನಾನು ಈ ಮೇಲ್ಕಂಡ ಪರೀಕ್ಷೆಗಳನ್ನು 10 ರಿಂದ 15 ನಿಮಿಷಗಳ ಅವಧಿಯಲ್ಲಿ ಮಾಡಿರುತ್ತೇನೆ. ಅಂಗನ್ಯೂನ್ಯತೆಯ ಪ್ರಮಾಣ ಪತ್ರದೊಂದಿಗೆ ಲಗತ್ತಿಸಿರುವ ದಾಖಲಾತಿಗಳಲ್ಲಿ ಪರೀಕ್ಷೆ ಮಾಡಿರುವ ಬಗ್ಗೆ ಉಲ್ಲೇಖ ಮಾಡಿರುತ್ತೇನೆ. ಪರೀಕ್ಷೆ ಮಾಡಿದ ಒಂದು ಎರಡು ದಿನಗಳ ನಂತರ ಅಂಗನ್ಯೂನ್ಯತೆಯ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಅಂಗನ್ಯೂನ್ಯತೆಯ ಪ್ರಮಾಣ ಪತ್ರವನ್ನು ಕೇಂದ್ರ ಸರ್ಕಾರದ ಮಾರ್ಗಸೂಚಿಯ ಕೈಪಿಡಿಯ ಪ್ರಕಾರ ನೀಡಬೇಕು ಎಂದರೆ ಸರಿ. ಸ್ನಾಯು ಶಕ್ತಿ 5 ನೇ ಹಂತದಿಂದ 4 ನೇ ಹಂತಕ್ಕೆ ಬಂದರೆ ಶೇ.20 ರಷ್ಟು ಅಂಗನ್ಯೂನ್ಯತೆ ಆಗುತ್ತದೆ. 1 ನೇ ಹಂತಕ್ಕೆ ಬಂದರೆ ಶೇ.80 ರಷ್ಟು ಅಂಗನ್ಯೂನ್ಯತೆ ಆಗುತ್ತದೆ. 5 ನೇ ಹಂತದಿಂದ 4 ನೇ ಹಂತಕ್ಕೆ ಬಂದರೆ ಅದನ್ನು ಮೈಲ್ಡ್ (ಸ್ವಲ್ಪ) ಪ್ರಮಾಣದ ನ್ಯೂನ್ಯತೆ ಆಗುತ್ತದೆ ಎಂದರೆ ಸರಿಯಲ್ಲ. ಇತರೆ ನ್ಯೂನ್ಯತೆಗಳು ಸಾಮಾನ್ಯ ಸ್ವರೂಪದ ನ್ಯೂನ್ಯತೆಗಳು ಎಂದರೆ ಸರಿಯಲ್ಲ. ಸಾಮಾನ್ಯ ಸ್ವರೂಪದ ನ್ಯೂನ್ಯತೆ ಇದ್ದಾಗ, ಕಾಲಕ್ರಮೇಣ ಅಂಗನ್ಯೂನ್ಯತೆ ಹೋಗುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಾಮಾನ್ಯ ಸ್ವರೂಪದ ಮೂಳೆ ಮುರಿತ ಆಗಿರುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ನಾನು ಹೇಳಿರುವಂತಹ ಯಾವುದೇ ನ್ಯೂನ್ಯತೆಗಳು ಇಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಯಾವುದೇ ಅಂಗನ್ಯೂನ್ಯತೆ ಇಲ್ಲದ ಕಾರಣ ಆರಾಧನಾ ಆಸ್ಪತ್ರೆಯವರು ಅರ್ಜಿದಾರರಿಗೆ ಅಂಗನ್ಯೂನ್ಯತೆಯ ಪ್ರಮಾಣ ಪತ್ರವನ್ನು ನಿಡಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನಾನು ಹೇಳಲು ಆಗುವುದಿಲ್ಲ ಎಂದು ಹೇಳುತ್ತಾರೆ. ಎಡಗೈಗೆ 35.43 ರಷ್ಟು ಅಂಗನ್ಯೂನ್ಯತೆ ಆಗಿರುತ್ತದೆ. ಅರ್ಜಿದಾರರಿಗೆ ಯಾವುದೇ ಅಂಗನ್ಯೂನ್ಯತೆ ಉಂಟಾಗಿಲ್ಲ ಎಂದರೆ ಸರಿಯಲ್ಲ. ನಾನು ಸುಮಾರು ಪ್ರಕರಣಗಳಲ್ಲಿ ಚಿಕಿತ್ಸೆಯನ್ನು ನೀಡದಿದ್ದಾಗ್ಯೂ ಅಂಗನ್ಯೂನ್ಯತೆಯ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದರೆ ಸರಿ. ಅರ್ಜಿದಾರರಿಗೆ ಹೆಚ್ಚಿನ ಪರಿಹಾರವನ್ನು ಪಡೆಯಲು ಅನುಕೂಲವಾಗಿ ಸುಳ್ಳು ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ.